10. ಬೆಲ್ಲದ ಬಾಗೇವಾಡಿ — ಈ ಯೋಜನೆಯನ್ನು ಪೂರ್ಣಗೊಳಿಸಿದೆ ಹೊಗೂ ನಿರ್ವಹಣೆ ಗಾಗಿ ಪಂಚಾಯಿತಿಗೆ ವರ್ಗಾಯಿಸಲಾಗಿದೆ.

11. ಅಮ್ಮಣಗಿ .... 1.60 ಲಕ್ಷ

ವಿಷಯ : ರಾಯಚೂರು ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ತೋಟ ಸ್ಥಾಪಿಸುವ ಬಗ್ಗೆ.

ಪ್ರ. ಸಂಖ್ಯೆ 574 (1430) ಡಾ. ಸಂಗಮೇಶ್ವರ ಸರದಾರ್ (ರಾಯಚೂರು).— ಮಾನ್ಯ ಪಶು ಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ರಾಯಚೂರು ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ತೋಟಗಾರಿಕೆ ಇಲಾಖೆಯವರ ಯಾವುದೇ ತೋಟಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಸದರಿ ಪ್ರದೇಶಗಳ ಜಮೀನು ಕೆಂಪು ಭೂಮಿಯಾಗಿದ್ದು ಜಲ ಸಂಪರ್ಕವನ್ನು ಹೊಂದಿರುವುದರಿಂದ ಅಲ್ಲಿ ತೋಟಗಾರಿಕಾ ಇಲಾಖೆಯವರು ತೋಟಗಳನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶು ಸಂಗೋಪನೆ, ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಸಚಿವರು).—

(ಅ) ಇಲ್ಲ.

(ಆ) ರಾಯಚೂರು ತಾಲ್ಲೂಕಿನ ತುಂತಾಪುರ ಗ್ರಾಮದಲ್ಲಿ ಒಂದು ತೋಟಗಾರಿಕಾ ಕ್ಷೇತ್ರ ಹಾಗೂ ರಾಯಚೂರು ನಗರ ಪ್ರದೇಶದಲ್ಲಿ ಒಂದು ಸಸ್ಯ ಕ್ಷೇತ್ರ ಈಗಾಗಲೇ ಇರುವ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಗುಳೇದಗುಡ್ಡ ಕ್ಷೇತ್ರದ ಬಾಗಲಕೋಟೆ ತಾಲ್ಲೂಕಿನ ಶಿರೂರು ಗ್ರಾಮದ ನಳದ ಯೋಜನೆ.

ಪ್ರ. ಸಂಖ್ಯೆ 575 (860).— ಶ್ರೀ ವಿ. ಮಲ್ಲಿಕಾರ್ಜುನ ಬನ್ನಿ (ಗುಳೇದಗುಡ್ಡ). — ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದ ಬಾಗಲಕೋಟೆ ತಾಲ್ಲೂಕಿನ ಶಿರೂರ ಗ್ರಾಮಕ್ಕೆ ಆಗುತ್ತಿರುವ ನಳದ ಯೋಜನೆಯ ಕಾರ್ಯದಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಯೋಜನೆಯ ವಿವರಗಳೇನು (ಇಲ್ಲದಿದ್ದಲ್ಲಿ ಸಕಾರಣಗಳೇನು) ;

(ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಅರ್ಧಕ್ಕೆ ಕೈಬಿಡುವ ವಿಚಾರ ಸರ್ಕಾರದವರ ಗಮನದಲ್ಲಿ ದೆಯೇ ;

(ಈ) ಹಾಗಿದ್ದಲ್ಲಿ (ಸಕಾರಣಗಳೊಂದಿಗೆ) ಅದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಇಲ್ಲ. ಆದರೆ ಅನಿವಾರ್ಯ ಕಾರಣಗಳಿಂದಾಗಿ ಸ್ವಲ್ಪ ನಿಧಾನವಾಗಿದೆ ಎನ್ನುವುದು ಗೊತ್ತಿದೆ.

(ಆ) ಈ ಯೋಜನೆಯು 1983-84ನೇ ಸಾಲಿನಲ್ಲಿ ಗುರಿಹೊಂದಿರುವ ಪಟ್ಟಿಯಲ್ಲಿ ಸೇರಿರುತ್ತದೆ. ಹಾಗೂ ಈ ಯೋಜನೆಯನ್ನು ಮಾರ್ಚ್ 1984ರ ಅಂತ್ಯದೊಳಗೆ ಕಾರ್ಯಗತಗೊಳಿಸಿ ಕುಡಿಯುವ ನೀರನ್ನು ಒದಗಿಸಲು ಪ್ರಯತ್ನ ನಡೆಯುತ್ತಿದೆ.

(ಇ) ಇಲ್ಲ.

(ಈ) ಪ್ರಶ್ನೆ (ಅ)ನಲ್ಲಿ ಉತ್ತರಿಸುವುದನ್ನು ನೋಡಬಹುದು.

ವಿಷಯ ; ವಿಟ್ಲ ಕ್ಷೇತ್ರಕ್ಕೆ ಒಳಪಟ್ಟ ಪ್ರದೇಶದಲ್ಲಿ ಕೊಳವೆ ಬಾವಿಗಳ ಮಂಜೂರಾತಿ

ಪ್ರ. ಸಂಖ್ಯೆ 576 (957) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ವಿಟ್ಲ ಕ್ಷೇತ್ರಕ್ಕೊಳಪಟ್ಟ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ನಿರ್ಮಿಸಿದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;